ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

ಸಿ.ಸಿ. ನಂ. **51/2023**

ಸಾಕ್ಷಿಗೆ ದಿನಾಂಕ **10.02.2026** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವರಾಜು | ಸಿ.ಡಬ್ಲ್ಯೂ- 2 |
| ತಂದೆಯ/ಗಂಡನ ಹೆಸರು | : | ವೆಂಕಟೇಶ್ | ಪಿ.ಡಬ್ಲ್ಯೂ- 2 |
| ವಯಸ್ಸು | : | 47 | |
| ಉದ್ಯೋಗ | : | ಆಟೋ ಚಾಲಕರು | |
| ವಾಸಸ್ಥಳ | : | ನಂಜನಗೂಡು | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ನನಗೆ ಪರಿಚಯ ಇರುವುದಿಲ್ಲ. ಚಾಸಾ 1 ನನ್ನ ಹೆಂಡತಿ, ಚಾಸಾ 3 ರವರು ನನ್ನ ಅತ್ತೆ, ಚಾಸಾ 4 ರಿಂದ 7 ರವರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 05.11.2022 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 1, 3 ರವರು ನಮಗೆ ಸೇರಿದ ಖಾಲಿ ಜಾಗದಲ್ಲಿ ಮನೆ ಕಟ್ಟಿಸುತ್ತಿದ್ದು, ಆ ಸಂದರ್ಬದಲ್ಲಿ ಆರೋಪಿತರೆಲ್ಲಾರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ನಮ್ಮ ಮನೆ ಕಟ್ಟಿಸುತ್ತಿದ್ದ ಜಾಗಕ್ಕೆ ಅತೀ ಕ್ರಮ ಪ್ರವೇಶ ಮಾಡಿ ನಮಗೆ ಸೇರಿದ ಜಾಗದಲ್ಲಿ ಏಕೆ ಮನೆ ಕಟ್ಟಿಸುತ್ತಿದ್ದೀರಾ

ಎಂದು ಏಕಾ ಏಕಿ ಜಗಳ ತೆಗೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಆ ಸಮಯದಲ್ಲಿ ನನ್ನ ಹೆಂಡತಿಯಾದ ಚಾಸಾ 1 ರವರು ಏಕೆ ಬೈಯುತ್ತಿದ್ದೀರಿ ಎಂದು ಕೇಳಿದಾಗ 1 ನೇ ಆರೋಪಿಯು ಕೈಗಳಿಂದ ಚಾಸಾ 1 ರವರ ಮೈಕೈಗೆ ಹೊಡೆದು, ಮಾನಭಂಗ ಮಾಡುವ ಉದ್ದೇಶದಿಂದ ಚಾಸಾ 1 ರವರು ಉಟ್ಟಿದ್ದ ನೈಟಿ ಬಟ್ಟೆಯನ್ನು ಹರಿದು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನನ್ನ ಅತ್ತೆಯಾದ ಚಾಸಾ 3 ರವರು ಗಲಾಟೆ ಬಿಡಿಸಲು ಬಂದಾಗ 2 ನೇ ಆರೋಪಿಯು ತನ್ನಕೈಯಲ್ಲಿದ್ದ ದೂಣ್ಣೆಯಿಂದ ಮೈಕೈಗೆ ಹೊಡೆಯಲು ಬಂದಾಗ ಚಾಸಾ 3 ರವರು ತಪ್ಪಿಸಿಕೊಂಡಿದ್ದು ಆ ದೊಣ್ಣೆಯ ಏಟು ಚಾಸಾ 1 ರವರು ಎದೆಯ ಭಾಗಕ್ಕೆ ಬಿದ್ದು ನೋವುಂಟಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಚಾಸಾ 3 ರವರನ್ನು ನಾನು ಬಿಡಿಸಲು ಹೋದಾಗ 5 ನೇ ಆರೋಪಿಯು ನನ್ನನ್ನು ನೆಲಕ್ಕೆ ಬೀಳಿಸಿ ಕೈಗಳಿಂದ ಮೈಕೈಗೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 6 ನೇ ಆರೋಪಿಯು ಇವರನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿ ಬೇರೆಯವರಿಗೆ ಕುಮ್ಮಕ್ಕು ನೀಡಿದರು ಎಂದರೆ ಸರಿಯಲ್ಲ.

ಈಗ ಮೇಲೆ ಓದಿ ಹೇಳಿದಂತೆ ದಿಃ 09.11.2022 ರಂದು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ 4 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಆರೋಪಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ